"ಮಗೂನ ನೋಡ್ಕೊಳ್ಳೋಕಾದ್ರೂ ಮನೇಲೊಬ್ರು ಬೇಕಲ್ಲ?"

"ನೆಂಟರಿಷ್ಟ್ರು ಅವನಿಗೂ ಇರ್ತಾರೆ ಕಣೇ..."

"ಅಯ್ಯೋ ಬಿಡಿ, ಸಮಯಾಂದ್ರೆ ಎಲ್ರೂ ಜಾರಿಕೊಳ್ಳೋರೇ. ಇದಂತೂ ದತ್ತು ತಗಂಡಿದ್ದು..."

"..."

"ಅವರು ಕಳಿಸಿಕೊಟ್ರೆ ಕರ್ಣಂಬನ್ನಿ ಇಲ್ಲಿಗೆ. ಎಲ್ರೂ ಒಂತುತ್ತು ಕಮ್ಮಿ ತಿಂದ್ರೆ ಅದಕ್ಕೆ ಸಾಕೇ ಸಾಕು. ಅಮೃತಾ ಸಾಕಬೇಕಿದ್ದನ್ನ ನೀವು ಸಾಕಿದ್ರೆ ನಿಮಗೆ ಎಷ್ಟೋ ಸಮಾಧಾನ ಆಗುತ್ತೆ..."

"ಚಿಕ್ಕಪ್ಪನ್ನ ಮರೆತುಬಿಟ್ರಾ?"

"ಅವರೂ ಹಣ್ಣಾಗಿರ್ತಾರೆ. ಮಗಳೇ ಇಲ್ಲಾಂದ್ಮೇಲೆ ಅಲ್ಲಿರೋಕೆ ಏನಿರುತ್ತೆ ಆಧಾರ?"

"ಮತ್ತೆ?"

"ಬರ್ತಾರಾದ್ರೆ ಕರ್ಣಂಬಂದ್ಬಿಡಿ. ದೇವ್ರಿದಾನೆ. ನಮ್ಮೋರು, ತಮ್ಮೋರು ಅಂದ್ರೆ ಬಿಟ್ಟಾಕೋಕಾಗುತ್ತಾ? ಹೆಂಗೂ ಅವರ ಹತ್ರ ದುಡ್ಡಿರುತ್ತೆ. ಇಲ್ಲಿರೋದು ಹಂಗು ಅನ್ನಿದ್ರೆ ಹತ್ರದಲ್ಲೇ ಸಣ್ಣಕ್ಕೊಂದು ಬಿಡಾರ ಎಬ್ಸಿದ್ರಾಯ್ತು..."

"ಅದ್ಯಾರೋ ಸನ್ಯಾಸಿ ಇಲಿ ಕಾಟ ತಡಿಯೋಕಾಗ್ದೆ ಬೆಕ್ಕು ಸಾಕ್ಕೊಂಡ್ನಂತೆ. ಚಿಕ್ಕಪ್ಪನ ಹತ್ರ ದುಡ್ಡು ಎಷ್ಟು ಉಳ್ಕೊಂಡಿದ್ಯೋ ಯಾರಿಗೆ ಗೊತ್ತುಂಟು?"

"ಎಷ್ಟಾರೂ ಇರ್ಲಿ. ಇದೇನು ಪೇಟೆ ಊರಲ್ವಲ್ಲ. ಹಿಡಿದದ್ದು ಮುಟ್ಟಿದ್ದಕ್ಕೆಲ್ಲಾ ದುಡ್ಡು ಎಣಿಸೋ ಪಂಚಾತ್ಕೆ ಇಲ್ಲ. ಹೆಂಗೋ ನಡಿಯತ್ತೆ..."

"ನಿನ್ನ ಧೈರ್ಯಾರ್ನೇ ಧೈರ್ಯ... " ಎಂದ ನಾಗರಾಜ.

"ನಮ್ಮ ಆತ್ಮಸಾಕ್ಷಿಗೆ ತಕ್ಕಂತೆ ನಾವು ನಡ್ಕೊಳ್ಳೋದಪ್ಪಾ..." ಸಮರ್ಥಿಸಿಕೊಂಡಳು ಸೀತೆ.

ನಾಗರಾಜ ಊಂ ಅನ್ನಲಿಲ್ಲ, ಉಪ್ಪಿನಕಲ್ಲು ಅನ್ನಲಿಲ್ಲ.

★★★

ಒಂದು ದಿನಕ್ಕೆ ಅಂತ ಹೋದ ಗಿರಾಕಿ ನಾಲ್ಕು ದಿನ ಕಳೆದರೂ ಪತ್ತೆ ಇಲ್ಲ. 'ವೈಕುಂಠ ಸಮಾರಾಧನೆ ಮುಗಿಸ್ಕಂಡೇ ಬರ್ತಾರೆ' ಅಂದುಕೊಂಡಳು ಸೀತೆ. ವೈಕುಂಠ ಸಮಾರಾಧನೆ ಮುಗಿದ ಮರುದಿನ 'ಇವತ್ತು ಬರ್ದೆ ಎಲ್ಲೋಗ್ತಾರೆ' ಎನ್ನುವ ಅಂದಾಜಿನಲ್ಲಿ ಗಂಡನನ್ನೂ ಲೆಕ್ಕಕ್ಕೆ ಹಿಡಿದು ರೊಟ್ಟಿಹಿಟ್ಟು ಕಲೆಸುವ ಸಿದ್ಧತೆ ನಡೆಸುವಾಗ, "ನೀರುಳ್ಳಿ ಜಾಸ್ತಿ ಹಾಕು'' ಅನ್ನುತ್ತಿದ್ದಾನೆ ದೊಡ್ಡವನು. ಸೀತೆ ಮತ್ತೆರಡು ನೀರುಳ್ಳಿಗೆಡ್ಡೆಯನ್ನು ಮೆಟ್ಟುಗತ್ತಿಯ ಹತ್ತಿರ ಎಳೆದುಕೊಂಡ ಹೊತ್ತಿನಲ್ಲಿ ಉಣುಗೋಲಿನಾಚೆ ಕಾರು ಬಂದು ನಿಂತ ಶಬ್ದ. ಮಕ್ಕಳು ಹೊರಗೆ ಓಡಿದರು. ಗಂಡ ಕಾರಲ್ಲಿ ಬಂದಿಳಿಯುತ್ತಿರುವ ಕಾರಣ ಅಂದಾಜಾಗಿ ಸೀತೆ ಕೂಡಾ ಮೆಟ್ಟುಗತ್ತಿಯನ್ನು ಒಂದು ಬದಿಗೆ ವಾಲಿಸಿಟ್ಟು ಹೊರಗೆ ಧಾವಿಸಿದಳು.


### ವಸುಮತಿ ಉಡುಪ

ಹೊಸನಗರ ತಾಲ್ಲೂಕಿನ ನಗರ ಹುಟ್ಟೂರು. ಮೈಸೂರಿನಲ್ಲಿ ವಾಸ. 'ಪರಿವರ್ತನೆ', 'ಸಂಬಂಧಗಳು', 'ಅನವರತ', 'ಅವ್ಯಕ್ತ', 'ಮನ್ವಂತರ' ಸೇರಿದಂತೆ 11 ಕಾದಂಬರಿಗಳನ್ನು, 'ಬಂದನಾ ಹುಲಿರಾಯನು', 'ವಿಕಲ್ಪ', 'ಶೇಷ ಪ್ರಶ್ನೆ' ಸೇರಿದಂತೆ 21 ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಐದು ಪ್ರಬಂಧ ಸಂಕಲನಗಳು ಪ್ರಕಟವಾಗಿವೆ. ಸಮಗ್ರ ಕತೆಗಳ ಸಂಕಲನ 'ಕಥಾವಸಂತ' ಮೂರು ಭಾಗಗಳಲ್ಲಿ ಪ್ರಕಟಗೊಂಡಿದೆ.